ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತೊಂದನೆಯ ಅಧಿವೇಶನ
ಬುಧವಾರ, ದಿನಾಂಕ : 23 ನೇ ಸೆಪ್ಟೆಂಬರ್, 2020

ಅನಧಿಕೃತ ಹೋಮ್‌ಸ್ಟೇ ಕುರಿತು

ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

277 (459) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಾರವಾರ ಜಿಲ್ಲೆಯ ಹಳಿಯಾಳ ಹಾಗೂ ಜೋಯಿಡಾ ತಾಲ್ಲೂಕಿನಲ್ಲಿ ಬಹಳಷ್ಟು ಹೋಮ್‌ಸ್ಟೇ ಹಾಗೂ ರೆಸಾರ್ಟ್ಸ್ ಅನಧಿಕೃತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಆ) ಸದರಿ ತಾಲ್ಲೂಕಿನಲ್ಲಿ ಎಷ್ಟು ಹೋಮ್‌ಸ್ಟೇ/ರೆಸಾರ್ಟ್‌ಗಳು ಕಾರ್ಯನಿರ್ವಹಿಸುತ್ತಿವೆ ; (ಅಧಿಕೃತ ಹಾಗೂ ಅನಧಿಕೃತ ಮಾಲೀಕರು ಅವರಿಗೆ ಪ್ರಾರಂಭ ಮಾಡಲು ಸಂಬಂಧಿಸಿದ ಇಲಾಖೆ ನೀಡಿರುವ ಎನ್.ಓ.ಸಿ ಪತ್ರ, ಸದರಿ ಹೋಮ್‌ಸ್ಟೇ/ರೆಸಾರ್ಟ್‌ಗಳ ವಿಸ್ತೀರ್ಣ ಅಳತೆ ಅರಣ್ಯ ಇಲಾಖೆ ಹಾಗೂ ಸಿಟಿ ಸರ್ವೆ ವರದಿ, ಪ್ರಕಾರ ಅರಣ್ಯ ಇಲಾಖೆಯ ನಕಾಶೆ ಸಮೇತ ವರದಿ ಪ್ರತಿಯೊಂದು ಹೋಮ್‌ಸ್ಟೇ/ರೆಸಾರ್ಟ್‌ಗಳ ವಿವರ ನೀಡುವುದು ;

(ಇ) ಕಾನೂನು ಬಾಹಿರವಾಗಿ ನಡೆಸುತ್ತಿರುವ ಹೋಮ್‌ಸ್ಟೇ/ರೆಸಾರ್ಟ್‌ಗಳ ಮೇಲೆ ಸರಕಾರ ಯಾವ ಕ್ರಮ ಕೈಗೊಳ್ಳುವುದು ; ಇದಕ್ಕೆ ಸ್ಪಂದಿಸದ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು ? (ಮಾಹಿತಿ ನೀಡುವುದು)